# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-04. ಬೆಳಗಾವಿ-591 156.

ದೂರವಾಣಿ ಸಂಖ್ಯೆ: 0831-2565208, 2565219 E-mail: directorcdcrcu@gmail.com


ಕ್ರಮ ಸಂಖ್ಯೆ: ರಾಚವಿ/ಬೆಳಗಾವಿ/ಸಿ.ಡಿ.ಸಿ(ಸಂಯೋಜನೆ)/2021-22/ ದಿನಾಂಕ: 11-06-2021

**ವಿಷಯ: 2021-22ನೇ ಶೈಕ್ಷಣಿಕ ಸಾಲಿಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸಗಳಿಗೆ ಸಂಯೋಜನೆಗೆ ಹಾಗೂ ಸ್ವಾಯತ್ತ ಸ್ಥಾನಮಾನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜನೆಯೊಂದಿಗೆ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿ 2021-22ನೇ ಸಾಲಿಗಾಗಿ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಇಚ್ಛಿಸುವ ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳು/ ಸಾರ್ವಜನಿಕ ಟ್ರಸ್ಟ್‌ಗಳಿಂದ ಮತ್ತು 2020-21ನೇ ಸಾಲಿನಲ್ಲಿ ತಾತ್ಕಾಲಿಕ ಸಂಯೋಜನೆ ಹೊಂದಿರುವ ಹಾಗೂ 2020-21ನೇ ಸಾಲಿಗೆ ಶಾಶ್ವತ ಸಂಯೋಜನೆ ಕೊನೆಗೊಳ್ಳುವ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಿಂದ ಬಿ.ಎ./ ಬಿ.ಎಸ್ಸಿ./ ಬಿ.ಕಾಂ./ ಬಿ.ಸಿ.ಎ./ ಬಿ.ಬಿ.ಎ./ ಬಿ.ಎಸ್.ಡಬ್ಲ್ಯೂ./ ಬಿ.ಇಡಿ./ ಬಿ.ಪಿ.ಇಡಿ./ ಎಂ.ಎ./ ಎಂ.ಕಾಂ./ ಎಂ.ಎಸ್ಸಿ./ ಎಂ.ಇಡಿ./ ಎಂ.ಪಿ.ಇಡಿ./ ಎಂ.ಎಸ್.ಡಬ್ಲ್ಯೂ. ಹಾಗೂ ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ/ ಡಿಪ್ಲೋಮಾ/ ಪಿ.ಜಿ. ಡಿಪ್ಲೋಮಾ ಇತ್ಯಾದಿ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ/ ವಿಸ್ತರಣೆ/ ಹೊಸ ಕೋರ್ಸ/ ಹೊಸ ವಿಷಯ/ ಹೊಸ ವಿಷಯಗಳ ಸಮೂಹ/ ಪ್ರವೇಶ ಮಿತಿ ಹೆಚ್ಚಳ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ/ ಸ್ವಾಯತ್ತ ಸ್ಥಾನಮಾನ ಸೇರಿದಂತೆ ಇತ್ಯಾದಿ ಸಂಯೋಜನೆಗಳಿಗಾಗಿ ಸಂಬಂಧಿಸಿದ ದಾಖಲೆಗಳೊಂದಿಗೆ ಸಂಬಂಧಿತ ಸಂಯೋಜನಾ ಶುಲ್ಕ ಮತ್ತು ಕ್ರೀಡಾ ಶುಲ್ಕ ರೂ.1,000/-ಗಳನ್ನು ಪ್ರತ್ಯೇಕವಾಗಿ ಪಾವತಿಸಿ, ಅರ್ಜಿಗಳನ್ನು ವೆಬ್‌ಸೈಟ್ ವಿಳಾಸ: www.onlineaffiliation.karnataka.gov.in/Affiliation2122/login.aspx ರ ಮೂಲಕ ಸಲ್ಲಿಸಬಹುದಾಗಿದೆ.

## ಸಂಯೋಜನೆಗೆ ಸಂಬಂಧಿಸಿದ ಸಾಮಾನ್ಯ ಸೂಚನೆಗಳು:

1. ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳು/ ಸಾರ್ವಜನಿಕ ಟ್ರಸ್ಟ್‌ಗಳು ಬೆಳಗಾವಿ, ಬಾಗಲಕೋಟ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹೊಸ ಸ್ನಾತಕ ಮಹಾವಿದ್ಯಾಲಯ ಪ್ರಾರಂಭಿಸಲು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

2. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಪಡೆದು ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ ಮತ್ತು ವಿಸ್ತರಣೆ ಪಡೆಯಲು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

3. ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಹೊಸ ಸ್ನಾತಕ ಕೋರ್ಸ/ ಹೊಸ ಸ್ನಾತಕೋತ್ತರ ಕೋರ್ಸ/ ಹೊಸ ವಿಷಯ/ ವಿಷಯಗಳ ಹೊಸ ಸಮೂಹ ಆರಂಭಿಸಲು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

4. ಅಸ್ತಿತ್ವದಲ್ಲಿರುವ ಸ್ನಾತಕ ಕೋರ್ಸ ಹಾಗೂ ಸ್ನಾತಕೋತ್ತರ ಕೋರ್ಸಗಳಿಗೆ ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

5. ಸತತವಾಗಿ ಐದು ವರ್ಷಗಳ ಕಾಲ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಪಡೆದಿರುವ ಕೋರ್ಸಗಳಿಗೆ ಶಾಶ್ವತ ಸಂಯೋಜನೆ ಪಡೆಯಲು (ನ್ಯಾಕ್ ಮಾನ್ಯತೆ ಕಡ್ಡಾಯ) ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

6. ಈಗಾಗಲೇ ಮಹಾವಿದ್ಯಾಲಯಗಳಿಗೆ/ ಕೋರ್ಸಗಳಿಗೆ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಮುಂದುವರಿಕೆ ಪಡೆದಿರುವ ಸಂಯೋಜನೆಯು 2020-21ನೇ ಶೈಕ್ಷಣಿಕ ಸಾಲಿಗೆ ಕೊನೆಗೊಳ್ಳುತ್ತಿದ್ದರೆ, ಅಂತಹ ಕೋರ್ಸಗಳಿಗೆ ಕಡ್ಡಾಯವಾಗಿ ಶಾಶ್ವತ ಸಂಯೋಜನೆ ಪರಿಶೀಲನೆಗೆ ಒಳಪಡಲು ಸಂಬಂಧಿಸಿದ ಶುಲ್ಕಗಳೊಂದಿಗೆ ಅರ್ಜಿ ಸಲ್ಲಿಸುವುದು.

7. ಎಂ.ಬಿ.ಎ./ ಎಂ.ಸಿ.ಎ. ಕೋರ್ಸ ಪ್ರಾರಂಭಿಸುವವರು AICTE ಯವರ ಮತ್ತು ಬಿ.ಇಡಿ./ ಬಿ.ಪಿ.ಇಡಿ./ ಎಂ.ಇಡಿ./ ಎಂ.ಪಿ.ಇಡಿ./ ಬಿ.ಎ.ಇಡಿ./ ಬಿ.ಎಸ್ಸಿ.ಇಡಿ. ಕೋರ್ಸ ಪ್ರಾರಂಭಿಸುವವರು NCTE ಪೂರ್ವಾನುಮತಿ/ ಮನ್ನಣೆಯನ್ನು ಕಡ್ಡಾಯವಾಗಿ ಪಡೆದುಕೊಂಡು ಅರ್ಜಿ ಸಲ್ಲಿಸಬೇಕು.

8. ಸತತ 10 ವರ್ಷಗಳ ಕಾಲ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದುಕೊಂಡಿರುವ, ಪ್ರಸ್ತುತ ನ್ಯಾಕ್ ಸಂಸ್ಥೆಯಿಂದ “ಎ” ಗ್ರೇಡ್ ಮಾನ್ಯತೆ ಪಡೆದಿರುವ ಮಹಾವಿದ್ಯಾಲಯದವರು ಸ್ವಾಯತ್ತತೆ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವುದು.

9. ಯಾವುದೇ ವಿಧದ ಸಂಯೋಜನೆಗೆ ಸಂಬಂಧಿಸಿದಂತೆ, ಮಹಾವಿದ್ಯಾಲಯಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಸರ್ಕಾರವು ಸೂಚಿಸಿರುವಂತೆ ಕನಿಷ್ಠ ಅಂಕಗಳು ಹಾಗೂ ಎಲ್ಲ ಮಾನದಂಡಗಳನ್ನು ಕಡ್ಡಾಯವಾಗಿ ಪೂರೈಸಬೇಕು. ಮಹಾವಿದ್ಯಾಲಯಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿ ಸರ್ಕಾರವು ನಿಗದಿಪಡಿಸಿದ Score and Decision Criteria ಪರಿಶೀಲಿಸಲು ಸೂಚಿಸಿದೆ.

10. ಅಲ್ಲದೇ, ಈಗಾಗಲೇ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸಂಯೋಜನ ಪಡೆದಿರುವ ಮಹಾವಿದ್ಯಾಲಯಗಳು ಸರ್ಕಾರವು ನಿಗದಿಪಡಿಸಿದ Score and Decision Criteria ನಲ್ಲಿ ನಿಗದಿಪಡಿಸಿದಂತೆ, ಎಲ್ಲ 8 ಮಾನದಂಡಗಳನ್ನು ಹಾಗೂ ಸಂಯೋಜನ ವಿಧದ ಅನುಸಾರ ಕನಿಷ್ಠ ಅಂಕಗಳನ್ನು ಹೊಂದುವುದು ಕಡ್ಡಾಯವಾಗಿದೆ. ಇಲ್ಲದೇ ಇದ್ದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಎ 2021, ಬೆಂಗಳೂರು, ದಿನಾಂಕ: 12–02–2021ರಂತೆ, 2023–24ನೇ ಸಾಲಿಗೆ ಅಂತಹ ಮಹಾವಿದ್ಯಾಲಯಗಳ ಕೋರ್ಸಗಳ ಪ್ರಥಮ ವರ್ಷ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ ದ್ವಿತೀಯ ಹಾಗೂ ತೃತೀಯ ವಿದ್ಯಾರ್ಥಿಗಳು, ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಆ ಮಹಾವಿದ್ಯಾಲಯಗಳನ್ನು ನಡೆಸಲು ಅವಕಾಶ ನೀಡಿ, ನಂತರ ಆ ಮಹಾವಿದ್ಯಾಲಯಗಳ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

11. ಸದರಿ ಸಂಯೋಜನಾ ಅಧಿಸೂಚನೆ ಹಾಗೂ ಇದರಲ್ಲಿನ ಸೂಚನೆಗಳು, ಮಾರ್ಗಸೂಚಿಗಳು, ನಿಯಮಾವಳಿಗಳು, ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ ಹಾಗೂ ಸರ್ಕಾರದ ಆದೇಶಗಳುನುಸಾರ ಹಾಗೂ ಮುದ್ರಣ ದೋಷಗಳುಂಟಾಗಿದ್ದಲ್ಲಿ ತಿದ್ದುಪಡಿಗಳಿಗೆ ಒಳಗಾಗುವ ಷರತ್ತಿಗೆ ಒಳಪಟ್ಟಿರುತ್ತವೆ.

12. ಈಗಾಗಲೇ ಸಂಯೋಜನೆಗೊಂಡಿರುವ ಮಹಾವಿದ್ಯಾಲಯಗಳು 2021–22ನೇ ಸಾಲಿನ ಸಂಯೋಜನಾ ಶುಲ್ಕಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಭರಿಸಬೇಕಾದ ಠೇವಣಿ ಮೊತ್ತದ ಎರಡು/ ಮೂರನೇ ಕಂತಿನ ಹಣವನ್ನು ಕಡ್ಡಾಯವಾಗಿ ಸಂದಾಯ ಮಾಡಿರತಕ್ಕದ್ದು. ಇಲ್ಲವಾದಲ್ಲಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

13. ಮಹಾವಿದ್ಯಾಲಯಗಳ ಹೆಸರು ಬದಲಾವಣೆ, ಆಡಳಿತ ಮಂಡಳಿಗಳ ಬದಲಾವಣೆ, ಮಹಾವಿದ್ಯಾಲಯಗಳನ್ನು ಸ್ಥಗಿತಗೊಳಿಸುವುದು, ಮಹಾವಿದ್ಯಾಲಯಗಳ ವಿಲೀನ, ಮಹಾವಿದ್ಯಾಲಯದ ಸ್ಥಳಾಂತರದ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವುದು.

## ಸೂಚನೆಗಳು

1. ಕರ್ನಾಟಕ ಸರ್ಕಾರದ ಸಂಯೋಜನೆ ಸಂಬಂಧಿತ ವೆಬ್‌ಸೈಟ್ ವಿಳಾಸ: www.onlineaffiliation.karnataka.gov.in/Affiliation2122/login.aspx ರ ಮೂಲಕ ಸಂಬಂಧಿಸಿದ ಎಲ್ಲ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವುದು. ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿ ಪಡೆದು, ಅದಕ್ಕೆ ದೃಢೀಕೃತ ಪೂರಕ ದಾಖಲೆಗಳನ್ನು ಹಾಗೂ ಶುಲ್ಕ ಭರಿಸಿದ್ದರ ಬಗ್ಗೆ ರಾ.ಚ.ವಿ.ಯ ಹಣಕಾಸು ವಿಭಾಗದಿಂದ ಪಡೆದ ರಸೀದಿ ಮತ್ತು ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ: www.rcub.ac.in ದಲ್ಲಿ CDC Link ನಲ್ಲಿ Affiliation Notification 2021-22 ನಲ್ಲಿರುವ ಮಹಾವಿದ್ಯಾಲಯದ ವಿವರದ ನಮೂನೆಯಲ್ಲಿ ಎಲ್ಲಾ ವಿವರಗಳನ್ನು ನಮೂದಿಸಿ, ಮಹಾವಿದ್ಯಾಲಯದವರು 2021–22ನೇ ಸಾಲಿಗೆ ತಾವು ಕೋರುವ ಸಂಯೋಜನೆ ವಿವರಗಳನ್ನು ಒಳಗೊಂಡ ಅನುಬಂಧ 01 ರಿಂದ 09ರಲ್ಲಿ ಅನ್ವಯಿಸುವ ಅನುಬಂಧಗಳು ಸೇರಿದಂತೆ ಸಂಪೂರ್ಣ ದಾಖಲೆಗಳೆಲ್ಲವೂಗಳನ್ನು ಬೈಂಡಿಂಗ್/ ಸ್ಪೈರಲ್ ಬೈಂಡಿಂಗ್ ಮಾಡಿಸಿ, ಒಂದು ಪ್ರತಿಯನ್ನು ನಿಗದಿತ ದಿನಾಂಕದೊಳಗಾಗಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ–591156 ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ಒಂದು ವೇಳೆ ಅರ್ಜಿಯಲ್ಲಿ ಹಾಗೂ ಮಹಾವಿದ್ಯಾಲಯದವರು ಒದಗಿಸುವ ವಿವರಗಳ ನಮೂನೆಯಲ್ಲಿ ಸರಿಯಾಗಿ/ ಸ್ಪಷ್ಟವಾಗಿ ಮಾಹಿತಿ ಒದಗಿಸದೇ ಇದ್ದಲ್ಲಿ, ಅದರಿಂದ ಉಂಟಾಗುವ ಗೊಂದಲ/ ಸಮಸ್ಯೆಗಳಿಗೆ ಮಹಾವಿದ್ಯಾಲಯದವರೇ ಹೊಣೆಗಾರರಾಗಿರುತ್ತಾರೆ. ಅಪೂರ್ಣವಾದ ಹಾಗೂ ಸೂಕ್ತ ದೃಢಿಕೃತ ದಾಖಲೆಗಳಿಲ್ಲದ ಅರ್ಜಿ/ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

2. ಸಂಯೋಜನೆಗಾಗಿ ಭರಿಸಬೇಕಾದ ಎಲ್ಲ ಶುಲ್ಕಗಳನ್ನು ಕಾಲೇಜು ಅಭಿವೃದ್ಧಿ ಮಂಡಳಿಯ ನಿಗದಿತ ಚಲನ್‌ಗಳ ಮೂಲಕ "ಹಣಕಾಸು ಅಧಿಕಾರಿಗಳು, ರಾ.ಚ.ವಿ. ಬೆಳಗಾವಿ ಇವರ ಹೆಸರಿನಲ್ಲಿರುವ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ: *05522200017220 (IFSC No. CNRB0010552)*ಗೆ ಭರಿಸಿ ಅಥವಾ ಹಣಕಾಸು ಅಧಿಕಾರಿಗಳು, ರಾ.ಚ.ವಿ. ಬೆಳಗಾವಿ ಇವರ ಹೆಸರಿಗೆ ಡಿ.ಡಿ. ಪಡೆದು, ಅವುಗಳನ್ನು ರಾ.ಚ.ವಿ.ಯ ಹಣಕಾಸು ವಿಭಾಗಕ್ಕೆ ಸಲ್ಲಿಸಿ, ಹಣಕಾಸು ವಿಭಾಗದಿಂದ ಪಡೆದ ರಸೀದಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ಸಲ್ಲಿಸುವುದು. ಸಂಯೋಜನೆಗಾಗಿ ಭರಿಸಬೇಕಾದ ಶುಲ್ಕ ಭರಿಸಿ ಚಲನ್/ ಡಿ.ಡಿ. ತಮ್ಮಲ್ಲಿಯೇ

ಇಟ್ಟುಕೊಂಡು ನಿಗದಿತ ದಿನಾಂಕದ ಒಳಗಾಗಿ ಅರ್ಜಿಯೊಂದಿಗೆ ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿ/ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

3. ಸಂಯೋಜನೆಯ ಶುಲ್ಕದ ಜೊತೆಗೆ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗಕ್ಕೆ ಸಂಬಂಧಿಸಿದ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಅಂತರ ಮಹಾವಿದ್ಯಾಲಯಗಳ ಅಥ್ಲೇಟಿಕ್ ಕ್ರೀಡಾ ಕೂಟವನ್ನು ಸಂಘಟಿಸಲು, ಮಹಾವಿದ್ಯಾಲಯದವರು ವರ್ಷಕ್ಕೆ Initial Contribution for Athletic Meet ರೂ.1,000/- ಗಳನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಜನರಲ್ ಫಂಡ ಖಾತೆ ಸಂಖ್ಯೆ 05522200016658 ಗೆ *(IFSC No. CNRB0010552)* ಲೆಕ್ಕ ಶೀರ್ಷಿಕೆ ಸಂಖ್ಯೆ: 205 ರಲ್ಲಿ ಚಲನ್ ಮೂಲಕ ಪ್ರತ್ಯೇಕವಾಗಿ ಭರಿಸಬೇಕು. ಅಥವಾ ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಹೆಸರಿನಲ್ಲಿ ಡಿ.ಡಿ. ಪಡೆಯಬೇಕು. ಮತ್ತು ಸದರಿ ಶುಲ್ಕ ಭರಿಸಿದ್ದರ ಬಗ್ಗೆ ರಾ.ಚ.ವಿ.ಯ ಹಣಕಾಸು ವಿಭಾಗದಿಂದ ಪಡೆದ ರಸೀದಿಯನ್ನು ಪ್ರತ್ಯೇಕ ಪತ್ರದೊಂದಿಗೆ ಲಗತ್ತಿಸಿ, ಸಂಯೋಜನಾ ಅರ್ಜಿಯೊಂದಿಗೆ ಕಾಲೇಜು ಅಭಿವೃದ್ಧಿ ಮಂಡಳಿಗೆ ಸಲ್ಲಿಸಬೇಕು.

4. ಕರ್ನಾಟಕ ರಾಜ್ಯ ಸರ್ಕಾರದ ಆದೇಶಾನುಸಾರ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಮಹಾವಿದ್ಯಾಲಯಗಳಿಗೆ ಸಂಯೋಜನಾ ಶುಲ್ಕದಲ್ಲಿ ಮಾತ್ರ ಶೇಕಡಾ 50%ರಷ್ಟು ವಿನಾಯತಿ ನೀಡಲಾಗಿದೆ. ಸದರಿ ವಿನಾಯತಿ ಪಡೆಯಲು, ಆಡಳಿತ ಮಂಡಳಿಯು ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡಕ್ಕೆ ಸೇರಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕೃತ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಅಂತಹ ಆಡಳಿತ ಮಂಡಳಿಯ/ ಮಹಾವಿದ್ಯಾಲಯದ ಅರ್ಜಿಗಳನ್ನು ಶುಲ್ಕದ ವಿನಾಯಿತಿಗೆ ಪರಿಗಣಿಸಲಾಗುವುದಿಲ್ಲ.

5. ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಹೆಸರುಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಕರ್ನಾಟಕ ಸರ್ಕಾರ ಮತ್ತು ವಿಶ್ವವಿದ್ಯಾಲಯ ನೀಡಿರುವ ಆದೇಶ/ ಅಧಿಸೂಚನೆಗಳಲ್ಲಿರುವಂತೆ ಇದೆ ಎಂಬುದರ ಬಗ್ಗೆ ಪರಿಶೀಲಿಸಿಕೊಳ್ಳುವುದು. ಒಂದು ವೇಳೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಹೆಸರಿನಲ್ಲಿ ವ್ಯತ್ಯಾಸಗಳಿದ್ದಲ್ಲಿ ಕೂಡಲೇ ಕಾಲೇಜು ಅಭಿವೃದ್ಧಿ ಮಂಡಳಿಯ ಗಮನಕ್ಕೆ ತಂದು, ಸಂಯೋಜನಾ ಅರ್ಜಿ ಸಲ್ಲಿಸುವ ಕಾರ್ಯದಲ್ಲಿ ತೊಡಗಿಕೊಳ್ಳತಕ್ಕದ್ದು. ಮಹಾವಿದ್ಯಾಲಯದವರು ಸಂಯೋಜನಾ ಅರ್ಜಿಯೊಂದಿಗೆ ಒದಗಿಸಬೇಕಾದ ಮಹಾವಿದ್ಯಾಲಯದ ವಿವರಗಳ ನಮೂನೆಯಲ್ಲಿಯೂ ಕರ್ನಾಟಕ ಸರ್ಕಾರ ಮತ್ತು ವಿಶ್ವವಿದ್ಯಾಲಯ ನೀಡಿರುವ ಆದೇಶ/ ಅಧಿಸೂಚನೆಗಳಲ್ಲಿರುವಂತೆಯೇ ಹೆಸರನ್ನು ನಮೂದಿಸತಕ್ಕದ್ದು.

6. ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ (MHRD) ನವದೆಹಲಿ ಇವರು ಸೂಚಿಸಿದಾಗ 2020-21ನೇ ಸಾಲಿನ DCF-II ಫೈಲನ್ನು AISHE ವೆಬ್‌ಸೈಟಿಗೆ (www.aishe.ac.nic.in) ಕಡ್ಡಾಯವಾಗಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ.

7. ಯು.ಜಿ.ಸಿ., ಕರ್ನಾಟಕ ಸರ್ಕಾರ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಅಧಿನಿಯಮ (Act), ಪರಿನಿಯಮ (Statute), ನಿಯಮ ಮತ್ತು ನಿಬಂಧನೆ (Rules and Regulation) ಆಧ್ಯಾದೇಶ (Ordinance), ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವ ಹಾಗೂ ರಾ.ಚ.ವಿ. ನಿಯಮಾವಳಿಗಳ ಪ್ರಕಾರ ತುಂಬಬೇಕಾದ ಎಲ್ಲ ರೀತಿಯ ಶುಲ್ಕಗಳನ್ನು ಭರಿಸಲು ಒಪ್ಪಿಗೆಯಿರುವ ಬಗ್ಗೆ ರೂ.20/-ಗಳ ಛಾಪಾ ಕಾಗದ ಮೇಲೆ ಮುಚ್ಚಳಿಕೆ ಪತ್ರ (Execution of bond)ವನ್ನು ಅರ್ಜಿಯೊಡನೆ ಕಡ್ಡಾಯವಾಗಿ ಲಗತ್ತಿಸಿರಬೇಕು.

8. ಹೊಸದಾಗಿ ಆರಂಭಿಸಲಾಗುವ ಮಹಾವಿದ್ಯಾಲಯಗಳಾಗಲೀ ಅಥವಾ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಾಗಲೀ ಸರ್ಕಾರ ಹಾಗೂ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪ್ರವೇಶಕ್ಕಿಂತ ಹೆಚ್ಚಿಗೆ ಪ್ರವೇಶವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 60ರಂತೆ ತೆಗೆದುಕೊಳ್ಳುವಂತಿಲ್ಲ. ಒಂದು ವೇಳೆ ಹೆಚ್ಚುವರಿಯಾಗಿ ಪ್ರವೇಶ ಪಡೆದ ಯಾವುದೇ ಒಬ್ಬ ವಿದ್ಯಾರ್ಥಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 61ರಂತೆ ಮಹಾವಿದ್ಯಾಲಯ/ ವಿಶ್ವವಿದ್ಯಾಲಯ ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ಅರ್ಹನಾಗಿರುವುದಿಲ್ಲ. ಒಂದು ವೇಳೆ ಹೆಚ್ಚುವರಿ ಪ್ರವೇಶ ತೆಗೆದುಕೊಂಡಲ್ಲಿ ಮುಂದಾಗುವ ಆಗು-ಹೋಗುಗಳಿಗೆ ಮಹಾವಿದ್ಯಾಲಯವೇ ಜವಾಬ್ದಾರಿಯಾಗಿರುತ್ತದೆ.

9. ಮಹಾವಿದ್ಯಾಲಯವು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ದ ಯಾವುದೇ ಉಪಬಂಧಗಳನ್ನು ಅಥವಾ ಸಂಯೋಜನೆಯ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲಗೊಂಡರೆ ಅಥವಾ ಮಹಾವಿದ್ಯಾಲಯವನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಅಂಥಹ ಮಹಾವಿದ್ಯಾಲಯದ ಸಂಯೋಜನೆಯನ್ನು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಉಪಪ್ರಕರಣ 63ರಂತೆ ಹಿಂತೆಗೆದುಕೊಂಡಲ್ಲಿ ಅಥವಾ ಮಹಾವಿದ್ಯಾಲಯ/ ಸಂಸ್ಥೆಯವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಉಪಪ್ರಕರಣ 65ರ ಪ್ರಕಾರ ಸ್ವ-ಇಚ್ಛೆಯಿಂದ ಕೋರ್ಸ/ ಮಹಾವಿದ್ಯಾಲಯವನ್ನು ಸ್ಥಗಿತಗೊಳಿಸಲು ಪ್ರಕ್ರಿಯಾ ಶುಲ್ಕ ರೂ.10,000/-ಗಳನ್ನು ಭರಿಸಿ, ಮನವಿ ಮಾಡಿಕೊಂಡಲ್ಲಿ, ಮಹಾವಿದ್ಯಾಲಯವು ಸ್ಥಗಿತಗೊಳಿಸಲು ಇಚ್ಛಿಸುವ ಕೋರ್ಸಗಳಿಗೆ ಸಂಬಂಧಿಸಿ, ವಿಶ್ವವಿದ್ಯಾಲಯದಲ್ಲಿ ಇಟ್ಟಿರುವ/ ಇಡಬೇಕಾದ ಒಟ್ಟು ಠೇವಣಿ ಮೊತ್ತದಲ್ಲಿ 20% ರಷ್ಟು

ಕಡಿತಗೊಳಿಸಿ, ಉಳಿದ ಹಣವನ್ನು ಮರಳಿಸಲಾಗುವುದು. ಒಂದು ವೇಳೆ ವಿಶ್ವವಿದ್ಯಾಲಯದ ಬೇರೆ-ಬೇರೆ ವಿಭಾಗಗಳಲ್ಲಿ ಭರಿಸಬೇಕಾದ ಶುಲ್ಕಗಳನ್ನು ಮಹಾವಿದ್ಯಾಲಯವು ಬಾಕಿ ಉಳಿಸಿಕೊಂಡ ಪಕ್ಷದಲ್ಲಿ ಅಂತಹ ಮೊತ್ತವನ್ನು ಸಹ ಠೇವಣಿ ಮೊತ್ತದಲ್ಲಿ ಕಡಿತಗೊಳಿಸಿ ಉಳಿದ ಹಣವನ್ನು ಮರಳಿಸಲಾಗುವುದು.

**10.** ಮಹಾವಿದ್ಯಾಲಯದವರು ನಿಗದಿತ ಶುಲ್ಕದೊಂದಿಗೆ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಂತರ ಮತ್ತು ವಿಶ್ವವಿದ್ಯಾಲಯದ ತನಿಖಾ ಸಮಿತಿಯು ಪರಿಶೀಲನಾ ವೇಳಾಪಟ್ಟಿಯನ್ನು ಸಿದ್ಧಪಡಿಸುವ ಪೂರ್ವದಲ್ಲಿ ತಾವು ಸಲ್ಲಿಸಿದ ಸಂಯೋಜನಾ ಅರ್ಜಿಯನ್ನು ಹಿಂಪಡೆಯಲು ಪತ್ರ ಮುಖೇನ ಅಧಿಕೃತವಾಗಿ ಮನವಿ ಮಾಡಿಕೊಂಡಲ್ಲಿ, ತಾವು ಭರಿಸಿದ ಶುಲ್ಕದಲ್ಲಿ 25% ಪ್ರಕ್ರಿಯಾ ಮೊತ್ತ ಕಡಿತಗೊಳಿಸಿ, ಇನ್ನುಳಿದ 75% ರಷ್ಟು ಹಣವನ್ನು ಮಾತ್ರ ಮರಳಿ ಕೊಡಲಾಗುವುದು. ಒಂದು ವೇಳೆ ತನಿಖಾ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಿದಲ್ಲಿ ಯಾವುದೇ ಶುಲ್ಕವನ್ನು ಮರಳಿ ನೀಡಲಾಗುವುದಿಲ್ಲ.

**11.** ಸರ್ಕಾರ ಮಹಾವಿದ್ಯಾಲಯದವರು, ಹೊಸದಾಗಿ ಕೋರ್ಸ, ವಿಷಯಗಳ ಸಮೂಹ, ಇತ್ಯಾದಿ ಹೊಸ ಸಂಯೋಜನೆಗಳಿಗಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವ ಪೂರ್ವದಲ್ಲಿ, ಮುಂದಿನ ಶೈಕ್ಷಣಿಕ ಸಾಲಿಗೆ ಅವಶ್ಯಕವಿರುವ ಹೊಸ ಸಂಯೋಜನೆಗಳ ಮಾಹಿತಿ, ಅವುಗಳ ಅಗತ್ಯತೆ ಮತ್ತು ಮಹಾವಿದ್ಯಾಲಯದಲ್ಲಿ ಹೊಸ ಸಂಯೋಜನೆಗಳಿಗೆ ಲಭ್ಯವಿರುವ ಶೈಕ್ಷಣಿಕ ಹಾಗೂ ಮೂಲಭೂತ ಸೌಲಭ್ಯಗಳ ಮಾಹಿತಿಯನ್ನು ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋದನೆ ಪಡೆದ ನಂತರವಷ್ಟೇ ವಿಶ್ವವಿದ್ಯಾಲಯಕ್ಕೆ ಹೊಸ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಸಲ್ಲಿಸುವುದು. ಹೀಗೆ ಅರ್ಜಿ ಸಲ್ಲಿಸುವಾಗ ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ತಾವು ಸಲ್ಲಿಸಿದ ಮನವಿ ಪತ್ರ ಹಾಗೂ ಸರ್ಕಾರವು ನೀಡಿರುವ ಅನುಮೋದನೆ ಪತ್ರದ ಪ್ರತಿಗಳನ್ನು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

**12.** ಸರ್ಕಾರ ಆದೇಶ ನಂ. ಇಡಿ/240/ಯು.ಆರ್.ಸಿ/2000 ದಿನಾಂಕ: 14-12-2004ರ ಮೇರೆಗೆ ಸರ್ಕಾರಿ ಮಹಾವಿದ್ಯಾಲಯಗಳ ಸಂಯೋಜನೆಗೆ, ಸರ್ಕಾರ ಕಾಲೇಜುಗಳಲ್ಲಿನ ನೂತನ ಕೋರ್ಸಗಳಿಗೆ/ ವಿಷಯಕ್ಕೆ/ ಭಾಷೆಗೆ/ ವಿದ್ಯಾರ್ಥಿ ಪ್ರಮಾಣದ ಹೆಚ್ಚಳ ಹಾಗೂ ಮುಂದುವರಿಕೆ/ ವಿಸ್ತರಣೆ ಮತ್ತು ಶಾಶ್ವತ ಸಂಯೋಜನೆಗೆ ವಿಶ್ವವಿದ್ಯಾಲಯಗಳಿಗೆ ಸಂದಾಯ ಮಾಡಬೇಕಾದ ಸಂಯೋಜನಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಆದರೆ ಸರ್ಕಾರಿ ಮಹಾವಿದ್ಯಾಲಯಗಳಿಗಾಗಿ ನಿಗದಿಪಡಿಸಿದ ಕನಿಷ್ಠ ಸಂಯೋಜನಾ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ. ಆದರೆ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದರೆ ಕನಿಷ್ಠ ಸಂಯೋಜನಾ ಶುಲ್ಕದೊಂದಿಗೆ ದಂಡ ಶುಲ್ಕವನ್ನೂ ಸಹ ಪಾವತಿಸಬೇಕಾಗುತ್ತದೆ.

**13.** ಹೀಗೆ ಮಹಾವಿದ್ಯಾಲಯಗಳಿಂದ ಸಲ್ಲಿಸಲಾಗುವ ಸಂಯೋಜನಾ ಅರ್ಜಿಗಳು ಸರಿಯಾಗಿ ಭರ್ತಿ ಮಾಡಿರುವ, ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿರುವ ಬಗ್ಗೆ ಪರಿಶೀಲಿಸಿ, ಸ್ವೀಕರಿಸಲಾಗುವುದು. ಅಪೂರ್ಣ ಮಾಹಿತಿ/ ದಾಖಲೆಗಳನ್ನು ಒಳಗೊಂಡ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಹೀಗೆ ತಿರಸ್ಕರಿಸಲಾದ ಅರ್ಜಿಗಳನ್ನು ಸರಿಪಡಿಸಿ ನಿಗದಿತ ದಿನಾಂಕದ ಒಳಗೆ ಸಂಬಂಧಿಸಿದ ಶುಲ್ಕಗಳೊಂದಿಗೆ ಮರು ಸಲ್ಲಿಸದೇ ಇದ್ದಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸಿದ ದಂಡಗಳೊಂದಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

**14.** ಸಂಯೋಜನೆಗೆ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯ ಪಠ್ಯಕ್ರಮ ನಿಗದಿಪಡಿಸಿರುವ ಕೋರ್ಸ/ ವಿಷಯಗಳಿಗೆ ಮಾತ್ರ ಸಂಯೋಜನೆ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸಬೇಕು.

**15.** ಪ್ರಸ್ತುತ ವರ್ಷ ಪ್ರಾರಂಭಿಸಬೇಕಾದ ಮಂಜೂರಾತಿಯಾದ ಮಹಾವಿದ್ಯಾಲಯವನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಸಂಸ್ಥೆಯವರೇ ಮುಂದಿನ ವರ್ಷ ಪ್ರಾರಂಭಿಸುವುದಾಗಿ ಕೇಳಿಕೊಂಡಲ್ಲಿ ಅಥವಾ ಹೊಸ ಸಂಯೋಜನೆ ಮಂಜೂರಾತಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ವಿಳಂಬವಾದಲ್ಲಿ ಸಂಬಂಧಪಟ್ಟ ಸಂಸ್ಥೆಯವರು/ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯದ ಸಂಯೋಜನೆಗೆ ಸಂಬಂಧಿಸಿದ ಇತರೆ ಶುಲ್ಕಗಳೊಂದಿಗೆ ಕೋರ್ಸಿನ ಮುಂದುವರಿಕೆ ಶುಲ್ಕಗಳನ್ನು ಪ್ರತಿ ವರ್ಷವು ಭರಿಸಬೇಕಾಗುತ್ತದೆ.

**16.** ಸ್ಥಳೀಯ ತನಿಖಾ ಸಮಿತಿಯು ಮಹಾವಿದ್ಯಾಲಯಗಳಲ್ಲಿ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳ ಕೊರತೆಗಳನ್ನು ಮನಗಂಡು, ಸುಧಾರಿಸಿಕೊಳ್ಳಲು ಷರತ್ತುಗಳನ್ನು ವಿಧಿಸಿ, ಸದರಿ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮರುಪರಿಶೀಲನೆಗೆ ಶಿಫಾರಸ್ಸು ಮಾಡಿ ವರದಿ ಸಲಿಸಿದ್ದಲ್ಲಿ, ಅಂತಹ ಮಹಾವಿದ್ಯಾಲಯ/ ಆಡಳಿತ ಮಂಡಳಿಯವರು ವಿಶ್ವವಿದ್ಯಾಲಯ ನಿಗದಿಪಡಿಸಿದ ಅವಧಿಯೊಳಗೆ ಮರುಪರಿಶೀಲನೆಗೆ ನಿಗದಿಪಡಿಸಿದ ಶುಲ್ಕವನ್ನು ಚಲನ್/ಡಿ.ಡಿ. ಯೊಂದಿಗೆ ಭರಿಸಿ, ಸ್ಥಳಿಯ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಪೂರೈಸಿದ ಕುರಿತಾಗಿ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ನಿಗದಿಪಡಿಸಿದ ಅವಧಿಯ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ ವಿಶ್ವವಿದ್ಯಾಲಯದ ನಿರ್ದೇಶನವನ್ನು ಪಾಲಿಸಲು ಮಹಾವಿದ್ಯಾಲಯ/ ಆಡಳಿತ ಮಂಡಳಿಯವರು ವಿಫಲವಾದಲ್ಲಿ ಅಂತಹ ಮಹಾವಿದ್ಯಾಲಯಗಳ/ ಆಡಳಿತ ಮಂಡಳಿಯವರು ಸಂಬಂಧಿಸಿದ ಸಂಯೋಜನೆಗೆ ನಿರಾಸಕ್ತಿ ಹೊಂದಿರುವುದಾಗಿ ತಿಳಿದು, ಸಂಯೋಜನೆ ಅರ್ಜಿಯನ್ನು ಹಿಂಪಡೆದಿರುವುದಾಗಿ ಪರಿಗಣಿಸಿ ಯಾವುದೇ ಹಿಂಬರಹ ನೀಡದೆ ಅಂತಹ ಅರ್ಜಿಗಳನ್ನು ಮುಕ್ತಾಯಗೊಳಿಸಲಾಗುವುದು.

**17.** ಮಹಾವಿದ್ಯಾಲಯದವರು ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳಿಗೆ ಸಂಬಂಧಿಸಿದಂತೆ ಐಚ್ಛಿಕ ವಿಷಯಗಳ ಸಮೂಹಗಳನ್ನು (Combinations) ರಚಿಸಿಕೊಳ್ಳುವಾಗ, ಕಡ್ಡಾಯವಾಗಿ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗವು ಸಿದ್ದಪಡಿಸಿರುವ **'ಐಚ್ಛಿಕ ವಿಷಯಗಳ ಗುಂಪು** (Combinations for Optional Subjects)'ನ್ನು ಪರಿಶೀಲಿಸಿ, ಐಚ್ಛಿಕ ವಿಷಯಗಳ ಸಮೂಹಗಳನ್ನು(Combinations) ಆಯ್ಕೆ ಮಾಡಿಕೊಳ್ಳತಕ್ಕದ್ದು. ಪ್ರತಿ ವಿಷಯಗಳ ಸಮೂಹಕ್ಕೆ ಕನಿಷ್ಠ 15 ವಿದ್ಯಾರ್ಥಿಗಳ ಪ್ರವೇಶಮಿತಿ ಇರತಕ್ಕದ್ದು. ಒಮ್ಮೆ ಐಚ್ಛಿಕ ವಿಷಯಗಳ ಸಮೂಹವೊಂದಕ್ಕೆ ಪ್ರವೇಶ ಮಿತಿ ನಿಗದಿಪಡಿಸಿದ ನಂತರ ಯಾವುದೇ ಕಾರಣಕ್ಕೂ ಅದನ್ನು ಕಡಿಮೆಗೊಳಿಸಲು ಅಥವಾ ಅದೇ ಪ್ರವೇಶ ಮಿತಿಯನ್ನು ಮತ್ತೊಂದು ಐಚ್ಛಿಕ ವಿಷಯಗಳ ಸಮೂಹಕ್ಕೆ ವರ್ಗಾಯಿಸಲು ಬರುವುದಿಲ್ಲ. ಪ್ರಸ್ತುತ ಮಂಜೂರಾದ ಐಚ್ಛಿಕ ವಿಷಯಗಳ ಸಮೂಹಗಳಿಗೆ ನಿಗದಿಪಡಿಸಿದ ಪ್ರವೇಶಮಿತಿಯನ್ನು ಕಡಿತಗೊಳಿಸಿ, ಮಂಜೂರಾಗಿರುವ ವಿಷಯಗಳನ್ನು ಆಯ್ದು ಹೊಸ ಐಚ್ಛಿಕ ವಿಷಯಗಳ ಸಮೂಹಕ್ಕೆ ಹೊಂದಾಣಿಕೆ ಮಾಡಲು ಬರುವುದಿಲ್ಲ. ಹೊಸ ಐಚ್ಛಿಕ ವಿಷಯಗಳ ಸಮೂಹಕ್ಕಾಗಿ ಪ್ರತ್ಯೇಕವಾಗಿ ಪ್ರವೇಶ ಮಿತಿ ಹೆಚ್ಚಳ ಪಡೆದುಕೊಳ್ಳುವುದು.

**18.** ಹಿಂದಿನ ಶೈಕ್ಷಣಿಕ ಸಾಲಿಗೆ ಮಹಾವಿದ್ಯಾಲಯದ ಮಂಜೂರು ಮಾಡಲಾದ ಸಮೂಹವಾರು ಪ್ರವೇಶ ಮಿತಿಯನ್ನು ಕಡಿಮೆ ಮಾಡಲು ಅವಕಾಶ ಇರುವುದಿಲ್ಲ ಹಾಗೂ ಹೊಸ ಐಚ್ಛಿಕ ವಿಷಯಗಳ ಸಂಯೋಜನಾ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವವರು ಕಡ್ಡಾಯವಾಗಿ ಪ್ರವೇಶ ಮಿತಿ ಹೆಚ್ಚಳಕ್ಕೆ ಸಂಬಂಧಿಸಿದ ಶುಲ್ಕವನ್ನು ಸಹ ಭರಿಸಬೇಕಾಗುತ್ತದೆ.

**19.** ವಿಶ್ವವಿದ್ಯಾಲಯ ನಿಗದಿಪಡಿಸಿದ ಎಲ್ಲ ಘಟಕಗಳನ್ನು ರಚಿಸಿ, ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿ, ಘಟಕಗಳ ವತಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಕುರಿತಾಗಿ ದಾಖಲೆಗಳನ್ನು ಹೊಂದಿರಬೇಕೆಂದು ಸೂಚಿಸಲಾಗಿದೆ.

## ಸಂಯೋಜನೆಯ ವಿಧ ಹಾಗೂ ಕೋರ್ಸವಾರು ಸೂಚನೆಗಳು

### I. ಹೊಸ ಮಹಾವಿದ್ಯಾಲಯ/ ಹೊಸ ಕೋರ್ಸ ಸಂಯೋಜನೆ:

**1.** ಹೊಸ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ/ ಸಂಘ/ ಟ್ರಸ್ಟಗಳು ಸರ್ಕಾರದ ನಿಯಮಾವಳಿಗಳ ಪ್ರಕಾರ ನೋಂದಾಯಿತವಾಗಿರತಕ್ಕದ್ದು ಮತ್ತು ಟ್ರಸ್ಟ/ಸಂಘ ಸಂಸ್ಥೆಯ ಪೋಟ್/ ಬೈಲಾ ನಿಯಮಗಳನ್ನು ಹೊಂದಿರಬೇಕು.

**2.** ಮಹಾವಿದ್ಯಾಲಯ ಹೊಂದಿರುವ ಕಟ್ಟಡವು ಕೃಷಿಯೇತರ ಭೂಮಿಯಾಗಿರಬೇಕು.

**3.** ಟ್ರಸ್ಟ/ ಸಂಘ ಸಂಸ್ಥೆಯವರು ಸ್ವಂತ ಕಟ್ಟಡವನ್ನು ಹೊಂದಿರಬೇಕು ಒಂದು ವೇಳೆ ಬಾಡಿಗೆ ಕಟ್ಟಡವನ್ನು ಹೊಂದಿದ್ದರೆ 5 ವರ್ಷದ ಬಾಡಿಗೆ ಕರಾರು ಪತ್ರ ಹೊಂದಿರಬೇಕು ಹಾಗೂ ತರಗತಿಗಳಿಗೆ, ಕಛೇರಿ ಕಾರ್ಯಾಲಯಕ್ಕೆ, ಗ್ರಂಥಾಲಯಕ್ಕೆ ಮತ್ತು ಆಟದ ಮೈದಾನಕ್ಕೆ ಅವಶ್ಯವಿರುವಷ್ಟು ಸ್ಥಳಾವಕಾಶ ಇರಬೇಕು. ಪ್ರಾರಂಭಿಸಲು ಇಚ್ಛಿಸಿರುವ ಕೋರ್ಸಗಳಿಗೆ ಅನುಗುಣವಾಗಿ ವಿಜ್ಞಾನ/ ಗಣಕಯಂತ್ರ ಸೇರಿದಂತೆ ಅಗತ್ಯವಾಗಿರುವ ಇನ್ನಿತರ ಪ್ರಯೋಗಾಲಯಗಳ ವ್ಯವಸ್ಥೆ ಹೊಂದಿರಬೇಕು ಹಾಗೂ ಪಠ್ಯಕ್ರಮದನ್ವಯ ಪ್ರಯೋಗಾಲಯಗಳ ಸಿದ್ಧತೆ ಮಾಡಿಕೊಂಡಿರಬೇಕು.

**4.** ಟ್ರಸ್ಟ/ ಸಂಘ ಸಂಸ್ಥೆಯು ಮಹಾವಿದ್ಯಾಲಯವನ್ನು ಪ್ರಾರಂಭಿಸಲು ವಿಶ್ವವಿದ್ಯಾಲಯದ ನಿಯಮಾವಳಿಯಂತೆ ಕಾಲೇಜಿಗೆ ಅರ್ಹ ಪ್ರಾಂಶುಪಾಲರನ್ನು ಮತ್ತು ಪ್ರಾರಂಭಿಸಲಿರುವ ಕೋರ್ಸುಗಳಿಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಪೂರ್ಣಕಾಲಿಕ ಉಪನ್ಯಾಸಕರನ್ನು ಖಾಯಂ ನೆಲೆಯಲ್ಲಿ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಕಛೇರಿಯ ಅವಶ್ಯಕತೆಗೆ ತಕ್ಕಂತೆ ಅಧೀಕ್ಷಕರು, ಗುಮಾಸ್ತರು ಹಾಗೂ ಜವಾನರನ್ನು ನೇಮಕ ಮಾಡಿಕೊಳ್ಳತಕ್ಕದ್ದು.

**5.** ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸುವ ಮಹಾವಿದ್ಯಾಲಯಗಳು, ಸಂಬಂಧಿಸಿದ ಸ್ನಾತಕ ಕೋರ್ಸನ್ನು ಆರಂಭಿಸಿ ಐದು ವರ್ಷಗಳು ಪೂರ್ಣಗೊಂಡಿರಬೇಕು ಮತ್ತು ಸದರಿ ಪದವಿ ಕೋರ್ಸಗಳನ್ನು ನಡೆಸುತ್ತಿರುವ ಮಹಾವಿದ್ಯಾಲಯದಲ್ಲಿಯೇ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಉದ್ದೇಶಿಸಿರಬೇಕು. ಅಲ್ಲದೇ ಸ್ಥಳೀಯ ತನಿಖಾ ಸಮಿತಿಗಳು ವಿಧಿಸಿದ ಈ ಹಿಂದಿನ ಎಲ್ಲಾ ಷರತ್ತುಗಳನ್ನು ಸಂಪೂರ್ಣವಾಗಿ ಹಾಗೂ ಕಡ್ಡಾಯವಾಗಿ ಪೂರೈಸಿರಬೇಕು. ಹೀಗೆ ಪ್ರಾರಂಭಿಸಲು ಉದ್ದೇಶಿಸಿರುವ ಸ್ನಾತಕೋತ್ತರ ಕೋರ್ಸಿಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಬೋಧಕ ಸಿಬ್ಬಂದಿಯನ್ನು ಹೊಂದಿರಬೇಕು. ಇವರುಗಳಲ್ಲಿ ಇಬ್ಬರು ಪಿಎಚ್.ಡಿ. ಪದವಿಯನ್ನು ಕಡ್ಡಾಯವಾಗಿ ಪಡೆದಿರಬೇಕು. ಸಂಶೋಧನೆ ಕಾರ್ಯಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಅಂದರೆ ಸರ್ಕಾರದ ಶಿಕ್ಷಣ ಇಲಾಖೆಯ ಮಾರ್ಗಸೂಚಿಯ ಪತ್ರ ಸಂಖ್ಯೆ: 1) ಇಡಿ 99 ಯುಎನ್ಇ 2002

ದಿನಾಂಕ: 02–11–2002, 2) ಇಡಿ 107 ಯುಆರ್‌ಸಿ 2006 ದಿನಾಂಕ: 21–08–2006 ರ ಪತ್ರದಲ್ಲಿ ತಿಳಿಸಿರುವಂತೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯ ಹೊಂದಿರುವ ಮಹಾವಿದ್ಯಾಲಯದವರು ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಅರ್ಜಿಯನ್ನು ಸಲ್ಲಿಸಬೇಕು.

6. ಹೊಸದಾಗಿ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ/ ಸಂಘ/ ಟ್ರಸ್ಟ್‌ಗಳು ಉದ್ದೇಶಿತ ಮಹಾವಿದ್ಯಾಲಯವನ್ನು ನಡೆಸಲು ವಿಶ್ವವಿದ್ಯಾಲಯ/ ಸರ್ಕಾರ/ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಎ.ಐ.ಸಿ.ಟಿ.ಇ./ ಎನ್.ಸಿ.ಟಿ.ಇ./ ಇತ್ಯಾದಿ ಸಂಬಂಧಿಸಿದ ಪ್ರಾಧಿಕಾರಗಳ ನಿಯಮಾವಳಿಗಳಂತೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

## II. ಮುಂದುವರಿಕೆ ಹಾಗೂ ವಿಸ್ತರಣೆ ಸಂಯೋಜನೆ:

1. ಮಹಾವಿದ್ಯಾಲಯಗಳು ಹೊಸ ಸಂಯೋಜನೆ ಪಡೆದಿರುವ ಕೋರ್ಸಗಳ ಅವಧಿ ಎರಡು ವರ್ಷ ಇದ್ದಲ್ಲಿ ಎರಡನೇ ವರ್ಷಕ್ಕೆ ಮುಂದುವರಿಕೆ ಹಾಗೂ ವಿಸ್ತರಣೆ ಮತ್ತು ಮೂರು ವರ್ಷಗಳ ಅವಧಿ ಇದ್ದಲ್ಲಿ ಎರಡು ಮತ್ತು ಮೂರನೇ ವರ್ಷಕ್ಕೆ ಮುಂದುವರಿಕೆ ಹಾಗೂ ವಿಸ್ತರಣೆ ಮತ್ತು ನಾಲ್ಕು ವರ್ಷಗಳ ಅವಧಿ ಇದ್ದಲ್ಲಿ ಎರಡು, ಮೂರು ಮತ್ತು ನಾಲ್ಕನೇ ವರ್ಷಕ್ಕೆ ಮುಂದುವರಿಕೆ ಹಾಗೂ ವಿಸ್ತರಣೆ ಶುಲ್ಕ ಭರಿಸಬೇಕಾಗುತ್ತದೆ. ಅಲ್ಲದೇ ಹಿಂದಿನ ವರ್ಷದಲ್ಲಿ ಬಾಕಿ ಉಳಿಸಿಕೊಂಡಿರುವ ಸಂಯೋಜನಾ ಶುಲ್ಕ ಹಾಗೂ ಠೇವಣಿ ಮೊತ್ತವನ್ನು ಭರಿಸಬೇಕಾಗುತ್ತದೆ.

2. ಸಂಯೋಜನಾ ಅರ್ಜಿಯೊಂದಿಗೆ ಹಿಂದಿನ ಮೂರು ವರ್ಷ ಪಡೆದುಕೊಂಡ ಸಂಯೋಜನಾ ಅಧಿಸೂಚನೆಯ ಪ್ರತಿಯನ್ನು ಮತ್ತು ಪ್ರವೇಶ ಮಿತಿ ಹೆಚ್ಚಳದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.

3. 2017–18ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯವು ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳಿಗೆ ವಿಷಯಗಳನ್ನು ಸಮೂಹವಾರು ಅಳವಡಿಸಲಾಗಿದ್ದರಿಂದ ತಾವು ಸಲ್ಲಿಸುವ ಸಂಯೋಜನಾ ಅರ್ಜಿಯಲ್ಲಿ ಕಡ್ಡಾಯವಾಗಿ ಸಮೂಹವಾರು ವಿಷಯಗಳನ್ನು ನಮೂದಿಸಲು ಸೂಚಿಸಿದೆ. ವಿಷಯಗಳ ಸಮೂಹ (Cobinatination) ಆಯ್ಕೆ ಮಾಡುವಾಗ ಮಹಾವಿದ್ಯಾಲಯಗಳು ತಪ್ಪು ಎಸಗಿದ್ದರೆ ಅವುಗಳಿಗೆ ಮಹಾವಿದ್ಯಾಲಯಗಳೇ ಹೊಣೆಗಾರರು. ಇಂತಹ ತಪ್ಪುಗಳು ಕಂಡು ಬಂದಲ್ಲಿ ಕೂಡಲೇ ನಿಗದಿತ ಅವಧಿಯ ಒಳಗೆ ವಿಶ್ವವಿದ್ಯಾಲಯದ ಮಾರ್ಗದರ್ಶನದೊಂದಿಗೆ ನಿಯಮಾನುಸಾರ ಸರಿಪಡಿಸಿಕೊಳ್ಳಲು ಸೂಚಿಸಲಾಗಿದೆ. ಇಂತಹ ಸಂದರ್ಭದಲ್ಲಿ ವಿಳಂಬವಾಗಿ ಉಂಟಾಗುವ ಸಮಸ್ಯೆಗಳಿಗೆ ಮಹಾವಿದ್ಯಾಲಯದವರೇ ಜವಾಬ್ದಾರರಾಗಿರುತ್ತಾರೆ.

## III. ಶಾಶ್ವತ ಸಂಯೋಜನೆ:

1. ಸತತವಾಗಿ 5 ವರ್ಷಗಳ ತಾತ್ಕಾಲಿಕ ಸಂಯೋಜನೆಯನ್ನು ಪೂರೈಸಿದ ಮತ್ತು ಹಿಂದಿನ ಐದು ವರ್ಷಗಳ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿದ ಮಹಾವಿದ್ಯಾಲಯಗಳು ತಮ್ಮ ಕೋರ್ಸಗಳಿಗೆ/ ವಿಷಯಗಳಿಗೆ ಈ ಕೆಳಗಿನ ಅರ್ಹತೆಗಳನ್ನು ಹೊಂದಿದ್ದಲ್ಲಿ ಮಾತ್ರ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

2. ಮಹಾವಿದ್ಯಾಲಯದ ಆಡಳಿತ ಮಂಡಳಿಯು ಕರ್ನಾಟಕ ಸರ್ಕಾರದ ನೋಂದಣಿ ಕಾಯ್ದೆಗಳಂತೆ ನೊಂದಣಿಯಾಗಿದ್ದು, ನಿಯಾಮಾನುಸಾರವಾಗಿ ಕಾಲಕಾಲಕ್ಕೆ ನೋಂದಣಿಯನ್ನು ನವೀಕರಣ ಮಾಡಿಕೊಂಡಿರಬೇಕು ಹಾಗೂ ಕಾಲಕಾಲಕ್ಕೆ ಆಡಳಿತ ಮಂಡಳಿಯ ಸಭೆಗಳನ್ನು ನಡೆಸಿರಬೇಕು ಹಾಗೂ ಕಾಯ್ದಿರಿಸಿದ ಸಭೆಗಳ ನಡಾವಳಿಗಳನ್ನು ಲಗತ್ತಿಸಿ ನೀಡುವುದು.

3. ತಮ್ಮ ಮಹಾವಿದ್ಯಾಲಯದ ಕೋರ್ಸಗಳಿಗೆ/ ವಿಷಯಗಳಿಗೆ ಶಾಶ್ವತ ಸಂಯೋಜನೆ ಪಡೆಯಲು ಇಚ್ಛಿಸಿದ್ದಲ್ಲಿ, ಮೊದಲು ಯು.ಜಿ.ಸಿ. ನಿಯಮದಂತೆ ಮಹಾವಿದ್ಯಾಲಯವು 2(ಎಫ್) ಮಾನ್ಯತೆ ಪಡೆದಿರಬೇಕು.

4. ಮಹಾವಿದ್ಯಾಲಯಗಳು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಸರ್ಕಾರವು ಕಾಲಕಾಲಕ್ಕೆ ನಿಗದಿಗೊಳಿಸುವ ನಿಯಮಾವಳಿಗಳಂತೆ ಸ್ವಂತ ಭೂಮಿ, ಕಟ್ಟಡ, ಬೋಧಕ ಸಿಬ್ಬಂದಿ ಹಾಗೂ ಇತರೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರಬೇಕು.

5. ಮಹಾವಿದ್ಯಾಲಯಗಳು ಶಾಶ್ವತ ಸಂಯೋಜನೆಗಾಗಿ ನ್ಯಾಕ್‌ನಿಂದ ಮಾನ್ಯತೆ ಪಡೆದಿರಬೇಕು. ಒಂದು ವೇಳೆ ಮಹಾವಿದ್ಯಾಲಯಗಳು ನ್ಯಾಕ್ ಮಾನ್ಯತೆಗಾಗಿ ಎಸ್.ಎಸ್.ಆರ್. ಸಲ್ಲಿಕೆ ಮಾಡಿದ್ದಲ್ಲಿ ಅಂತಹ ಮಹಾವಿದ್ಯಾಲಯಗಳೂ ಕೂಡಾ

ಶಾಶ್ವತ ಸಂಯೋಜನೆ/ ಪರಿಶೀಲನೆಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಮಹಾವಿದ್ಯಾಲಯವು ನ್ಯಾಕ್ ಮಾನ್ಯತೆಗೆ ಸಲ್ಲಿಸಿದ ಅರ್ಜಿ ತಿರಸ್ಕೃತವಾದಲ್ಲಿ, ಅಂತಹ ಮಹಾವಿದ್ಯಾಲಯಕ್ಕೆ ತಾತ್ಕಾಲಿಕ ಸಂಯೋಜನೆಯನ್ನೇ ಮುಂದುವರೆಸಲಾಗುವುದು.

6. ಶಾಶ್ವತ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ಅರ್ಜಿಗಳೊಂದಿಗೆ, ಕಳೆದ 5 (ಐದು) ವರ್ಷಗಳ ಮುಂದುವರಿಕೆ ಸಂಯೋಜನಾ ಅಧಿಸೂಚನೆಗಳು, ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷಾ ಫಲಿತಾಂಶಗಳು ಹಾಗೂ ಸಂಸ್ಥೆಯ/ ಮಹಾವಿದ್ಯಾಲಯದ ಲೆಕ್ಕ ಪರಿಶೋಧಕರಿಂದ ದೃಢಿಕರಿಸಿದ ಲೆಕ್ಕ ಪರಿಶೋಧನಾ ವರದಿಗಳು ಹಾಗೂ ಸ್ಥಳೀಯ ತನಿಖಾ ಸಮಿತಿಯ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿರುವ ಬಗ್ಗೆ ಅನುಪಾಲನಾ ವರದಿಗಳನ್ನು ಪೂರ್ಣಗೊಳಿಸಿ ದೃಢೀಕರಿಸಿ ಒದಗಿಸಬೇಕು.
7. ಮಹಾವಿದ್ಯಾಲಯವು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಸರ್ಕಾರದ ನಿಯಮಾನುಸಾರವಾಗಿ ಕನಿಷ್ಠ 50% ರಷ್ಟು ಖಾಯಂ ಆಗಿ ನೇಮಕವಾದ ಸಿಬ್ಬಂದಿಗಳನ್ನು ಹೊಂದಿರಬೇಕು ಹಾಗೂ ನಿಯಮಗಳಿಗೆ ಅನುಗುಣವಾಗಿ ವೇತನ, ಪಿ.ಎಫ್, ಗ್ರಾಚುಯಿಟಿ, ಇ.ಎಸ್.ಐ. ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಿರಬೇಕು.

8. ಹೀಗೆ ಎಲ್ಲಾ ಷರತ್ತುಗಳನ್ನು/ ನಿಯಮಗಳನ್ನು ಪಾಲಿಸಿದ ಮಹಾವಿದ್ಯಾಲಯಗಳಿಗೆ ನೀಡಬೇಕಾದ ಶಾಶ್ವತ ಸಂಯೋಜನೆಯು ವಿದ್ಯಾ ವಿಷಯಕ ಪರಿಷತ್ ಸಭೆ, ಸಿಂಡಿಕೇಟ್ ಸಭೆ ಹಾಗೂ ಸರ್ಕಾರದ ಅನುಮೋದನೆಗಳ ಶರತ್ತಿಗೆ ಹಾಗೂ ಕಾಲಕಾಲಕ್ಕೆ ಯುಜಿಸಿ/ ಸರ್ಕಾರದವರು ಹೊರಡಿಸುವ ಆದೇಶ/ ತಿದ್ದುಪಡಿಗಳ ಷರತ್ತುಗಳಿಗೆ ಒಳಪಟ್ಟಿರುತ್ತದೆ

9. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 227 ಯುಆರ್‌ಸಿ 2017 ದಿನಾಂಕ: 07-07-2017 ರ ಪತ್ರದಂತೆ ಶಾಶ್ವತ ಸಂಯೋಜನೆ ಅವಧಿಯು ನ್ಯಾಕ್ ಮಾನ್ಯತೆಯ ಗ್ರೇಡ್ ಆಧಾರದ ಮೇಲೆ ಅವಲಂಬಿತವಾಗಿರುವುದಾಗಿ ಸೂಚಿಸಿರುವುದರಿಂದ ನ್ಯಾಕ್ ಸಂಸ್ಥೆಯಿಂದ "ಎ" ಗ್ರೇಡ್ ಮಾನ್ಯತೆ ಪಡೆದಲ್ಲಿ 5 ವರ್ಷ, "ಬಿ" ಗ್ರೇಡ್ ಮಾನ್ಯತೆ ಪಡೆದಲ್ಲಿ 4 ವರ್ಷ, "ಸಿ" ಗ್ರೇಡ್ ಮಾನ್ಯತೆ ಪಡೆದಲ್ಲಿ 3 ವರ್ಷಗಳ ಅವಧಿಗೆ ಶಾಶ್ವತ ಸಂಯೋಜನೆ ಅವಧಿಯನ್ನು ನಿಗದಿಪಡಿಸಲಾಗುವುದು ಅಲ್ಲದೆ ಶಾಶ್ವತ ಸಂಯೋಜನೆಯ ಅವಧಿಯು ಸರ್ಕಾರ/ ಯು.ಜಿ.ಸಿ. ಯಿಂದ ಕಾಲಕಾಲಕ್ಕೆ ಬದಲಾವಣೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.

## IV. ಶಾಶ್ವತ ಸಂಯೋಜನೆ ನವೀಕರಣ:

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ ಅಧಿನಿಯಮ 62(3) ರ ಮೇರೆಗೆ ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಪ್ರಕಾರ್ಯಗಳನ್ನು ವಿಶ್ವವಿದ್ಯಾಲಯವು ಪರಿಶೀಲಿಸಬೇಕಾಗುತ್ತದೆ. ಕಾರಣ ಶಾಶ್ವತ ಸಂಯೋಜನೆಯನ್ನು ಪಡೆದುಕೊಂಡ ಮಹಾವಿದ್ಯಾಲಯಗಳು ಈ ಕೆಳಗಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

2. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಹೊಸ ಶಾಶ್ವತ ಸಂಯೋಜನೆಗೆ ಸಂಬಂಧಿಸಿದ ಎಲ್ಲಾ ನಿಯಮಗಳೂ ಅನ್ವಯವಾಗುತ್ತವೆ.

3. ಮಹಾವಿದ್ಯಾಲಯಗಳು ತಮ್ಮ ಶಾಶ್ವತ ಸಂಯೋಜನೆಯು ಪೂರ್ಣಗೊಳ್ಳುವ ಒಂದು ವರ್ಷ ಮೊದಲೇ ಶಾಶ್ವತ ಸಂಯೋಜನಾ ನವೀಕರಣ ಅರ್ಜಿಯನ್ನು ಆನ್‌ಲೈನ್ ಮೂಲಕ ಸಂಬಂಧಿಸಿದ ಶುಲ್ಕಗಳೊಂದಿಗೆ ಭರಿಸಿ, ಅರ್ಜಿ ಸಲ್ಲಿಸತಕ್ಕದ್ದು (**ಉದಾ:** ಮಹಾವಿದ್ಯಾಲಯವು ನ್ಯಾಕ್‌ನಿಂದ 'ಎ' ಗ್ರೇಡ್ ಮಾನ್ಯತೆಯೊಂದಿಗೆ 2016-17 ರಿಂದ 2020-21ರ ವರೆಗೆ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವಿಕರಣ ಪಡೆದಿದ್ದಲ್ಲಿ, ಅಂತಹ ಮಹಾವಿದ್ಯಾಲಯವು ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ, 2021-22ನೇ ಸಾಲಿನ ಸಂಯೋಜನೆಗಾಗಿ ವಿಶ್ವವಿದ್ಯಾಲಯವು ಸಂಯೋಜನೆ ಅಧಿಸೂಚನೆ ಪ್ರಕಟಿಸಿದಾಗ ಕಡ್ಡಾಯವಾಗಿ ಅರ್ಜಿ ಸಲ್ಲಿಸುವುದು).

4. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಮಹಾವಿದ್ಯಾಲಯಗಳು ಹಿಂದಿನ ಸ್ಥಳೀಯ ತನಿಖಾ ಸಮಿತಿಯು ವಿಧಿಸಿದ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿರಬೇಕು.

5. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಮಹಾವಿದ್ಯಾಲಯದವರು ನಿಗದಿತ ಸಮಯಕ್ಕೆ ಅರ್ಜಿ ಸಲ್ಲಿಸದಿದ್ದಲ್ಲಿ ಮುಂದಾಗುವ ಎಲ್ಲ ಆಗು-ಹೋಗುಗಳಿಗೆ ಮಹಾವಿದ್ಯಾಲಯದವರೇ ಜವಾಬ್ದಾರರಾಗಿರುತ್ತಾರೆ.

## V. ಠೇವಣಿ ಹಣ:

ಯಾವುದೇ ಸಂಘ/ ಸಂಸ್ಥೆಯವರು ಹೊಸ ಮಹಾವಿದ್ಯಾಲಯವನ್ನು/ ಕೋರ್ಸ ಪ್ರಾರಂಭಿಸಬೇಕೆಂದು ಇಚ್ಛಿಸಿ ಸಲ್ಲಿಸಿದ ಅರ್ಜಿಗೆ ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆ ನೀಡಿದ್ದಲ್ಲಿ, ಸದರಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಹೀಗೆ ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿ, ಸರ್ಕಾರವು ಆದೇಶ ನೀಡಿದ ನಂತರ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯ ಸೂಚಿಸುವ ದಾಖಲೆಗಳನ್ನು ಹಾಗೂ ವಿಶ್ವವಿದ್ಯಾಲಯದಿಂದ ನಿಗದಿಪಡಿಸಿದ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಭರಿಸಬೇಕಾಗುತ್ತದೆ. ಹೊಸ ಮಹಾವಿದ್ಯಾಲಯ/ ಕೋರ್ಸ ಪ್ರಾರಂಭಿಸುವವರು ವಿಶ್ವವಿದ್ಯಾಲಯ ನಿಗದಿಪಡಿಸಿದ ಠೇವಣಿ ಹಣವನ್ನು ಎರಡು ಕಂತುಗಳಲ್ಲಿ ನಿಗದಿತ ವರ್ಷಗಳಲ್ಲಿ ಭರಿಸಲು ಸೂಚಿಸಲಾಗಿದೆ. ಅಂದರೆ ಪ್ರಾರಂಭದಲ್ಲಿ ಒಟ್ಟು ಮೊತ್ತದ ಅರ್ಧದಷ್ಟು ಕಡ್ಡಾಯವಾಗಿ ಭರಣಾ ಮಾಡಿ ಉಳಿದ ಮೊತ್ತವನ್ನು ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ಮುಂದುವರಿಕೆ/ ವಿಸ್ತರಣೆ ಅರ್ಜಿಯೊಂದಿಗೆ ಭರಿಸಬೇಕಾಗುತ್ತದೆ. ಒಂದು ವೇಳೆ ನಿಗದಿತ ಸಮಯದಲ್ಲಿ ಭರಿಸದೇ ಇದ್ದಲ್ಲಿ ಮಹಾವಿದ್ಯಾಲಯದವರು ಮೀರಿದ ಅವಧಿಗೆ ಪ್ರತಿ ವರ್ಷಕ್ಕೆ 10% ರಷ್ಟು ದಂಡ ಶುಲ್ಕವನ್ನು ಭರಿಸಬೇಕಾಗುತ್ತದೆ. ಸದರಿ ದಂಡ ಶುಲ್ಕವನ್ನು ಮುಂದಿನ 2 ವರ್ಷಗಳ ಒಳಗಾಗಿ ಭರಿಸುವುದು ಕಡ್ಡಾಯವಾಗಿದೆ. ಒಂದು ವೇಳೆ ಹೊಸ ಮಹಾವಿದ್ಯಾಲಯ /ಕೋರ್ಸ ಪ್ರಾರಂಭಿಸುವುದಾಗಿನಿಂದ ಒಟ್ಟು 3 ವರ್ಷಗಳ ಅವಧಿಯ ಒಳಗಡೆ ಸಂಯೋಜನಾ ಠೇವಣಿಯ 2ನೇ ಕಂತಿನ ಮೊತ್ತವನ್ನು ಭರಿಸದೇ ಹೋದಲ್ಲಿ, ವಿಶ್ವವಿದ್ಯಾಲಯವು ನಿಯಮಾನುಸಾರ ಕ್ರಮ ಜರುಗಿಸಬಹುದಾಗಿದೆ. **ಸರ್ಕಾರಿ ಮಹಾವಿದ್ಯಾಲಯಗಳನ್ನು ಹೊರತುಪಡಿಸಿ, ಇನ್ನಿತರ ಮಹಾವಿದ್ಯಾಲಯದವರಿಗೆ ಠೇವಣಿ ಶುಲ್ಕದಲ್ಲಿ ಯಾವುದೇ ರೀತಿಯ ರಿಯಾಯತಿ ಇರುವುದಿಲ್ಲ.**

## VI. ಸ್ವಾಯತ್ತತೆ/ ಸ್ವಾಯತ್ತತೆ ನವೀಕರಣ:

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸ್ವಾಯತ್ತತೆ (Autonomy) ಹೊಂದಲು ಇಚ್ಛಿಸುವ ಸಂಯೋಜಿತ ಮಹಾವಿದ್ಯಾಲಯಗಳಿಂದ ವಿಶ್ವವಿದ್ಯಾಲಯ ಧನಸಹಾಯ ಆಯೋಗ, ನವದೆಹಲಿ ಇವರು ತಮ್ಮ ಅಧಿಕೃತ ಜಾಲತಾಣದಲ್ಲಿ ಹೊರಡಿಸಿರುವ UGC Guidelines ಮಾರ್ಗಸೂಚಿಗಳ ಅನ್ವಯ ಅರ್ಜಿಗಳನ್ನು ಆಹ್ವಾನಿಸುತ್ತಿದ್ದು, ಅರ್ಜಿ ಸಲ್ಲಿಸಲು ಇಚ್ಛಿಸುವ ಮಹಾವಿದ್ಯಾಲಯಗಳು ಈ ಕೆಳಗಿನ ಅರ್ಹತಾ ಮಾನದಂಡಗಳನ್ನು ಕಡ್ಡಾಯವಾಗಿ ಪೂರೈಸಿರಬೇಕಾಗಿರುತ್ತದೆ.

1. ಮಹಾವಿದ್ಯಾಲಯವನ್ನು ಸರ್ಕಾರ/ ವಿಶ್ವವಿದ್ಯಾಲಯ/ ಯುಜಿಸಿ ಮತ್ತು ಇನ್ನಿತರ ಸಂಬಂಧಿತ ಪ್ರಾಧಿಕಾರದ ನಿಯಮಾವಳಿಯಂತೆ ಪ್ರಾರಂಭಿಸಿರಬೇಕು ಹಾಗೂ ನಿಗದಿತ ಶುಲ್ಕಗಳನ್ನು ಭರಿಸಬೇಕು.
2. ಯುಜಿಸಿ ಕಾಯ್ದೆಯ ಸೆಕ್ಷನ್ 2(ಎಫ್) ಅಡಿಯಲ್ಲಿ ಮಾನ್ಯತೆಯನ್ನು ಕಡ್ಡಾಯವಾಗಿ ಪಡೆದಿರಬೇಕು.
3. ಮಹಾವಿದ್ಯಾಲಯವನ್ನು ಪ್ರಾರಂಭಿಸಿ ಕನಿಷ್ಠ ಸತತ 10 ವರ್ಷಗಳ ಸಂಯೋಜನೆಯನ್ನು ಪೂರೈಸಿರಬೇಕು.
4. ಮಹಾವಿದ್ಯಾಲಯವು ನ್ಯಾಕ್ ಪ್ರಾಧಿಕಾರದಿಂದ ಪ್ರಸ್ತುತ ಚಾಲ್ತಿಯಲ್ಲಿರುವ "ಎ" ಗ್ರೇಡ್ ಮಾನ್ಯತೆಯನ್ನು ಹೊಂದಿರಬೇಕು.
5. ಯುಜಿಸಿ, ನವದೆಹಲಿ ಇವರ ಮಾರ್ಗಸೂಚಿಗಳನ್ನು ಹಾಗೂ ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಹಾಗೂ ಎಲ್ಲಾ ಷರತ್ತುಗಳನ್ನು ಪೂರೈಸಿರಬೇಕು.
6. ಸ್ವಾಯತ್ತತೆ ಪಡೆದ ಮಹಾವಿದ್ಯಾಲಯಗಳು ಐದು ವರ್ಷಕ್ಕೆ ಒಮ್ಮೆ ಪರಿಶೀಲನೆಗೆ ಒಳಪಟ್ಟು ತಮ್ಮ ಸ್ವಾಯತ್ತ ಸ್ಥಾನಮಾನವನ್ನು ಕಡ್ಡಾಯವಾಗಿ ನವೀಕರಿಸಿಕೊಳ್ಳಬೇಕು.

ಸ್ವಾಯತ್ತತೆ ಕುರಿತಾಗಿ ಹೆಚ್ಚಿನ ವಿವರಗಳಿಗಾಗಿ ಯು.ಜಿ.ಸಿ. ಜಾಲತಾಣ ವಿಳಾಸ https;//www.ugc.ac.in ರಿಂದ ಮಾಹಿತಿ ಪಡೆಯಲು ಸೂಚಿಸಿದೆ.

## VII. ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡೀಸ್ ಮತ್ತು ಪಿ.ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್:

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡಿಸ್ ಮತ್ತು ಪಿ. ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡಿಸ್ ಕೋರ್ಸನ್ನು ಪ್ರಾರಂಭಿಸಲು ಇಚಿಸ್ಸುವ ಮಹಾವಿದ್ಯಾಲಯಗಳಿಗೆ ಠೇವಣಿ ಶುಲ್ಕ ರಹಿತವಾಗಿ ಹಾಗೂ ಹೊಸ ಸಂಯೋಜನಾ ಶುಲ್ಕದಲ್ಲಿ 50% ರಿಯಾಯತಿಯೊಂದಿಗೆ ಸಂಯೋಜನೆ ನೀಡಲು ದಿನಾಂಕ: 07-07-2017ರಂದು ಸಿಂಡಿಕೇಟ್ ಸಭೆಯು ನಿರ್ಧರಿಸಿದೆ. ಆದ್ದರಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬೆಳಗಾವಿ, ಬಾಗಲಕೋಟ ಮತ್ತು ವಿಜಯಪುರ ಜಿಲ್ಲೆಯಲ್ಲಿಯ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯದವರು ಅಥವಾ ಸರ್ಕಾರದ ನಿಯಮಾವಳಿಯಂತೆ ಸಂಘ/

ಸಂಸ್ಥೆ/ ಟ್ರಸ್ಟ್ ಹೊಂದಿದವರು ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡಿಸ್ ಮತ್ತು ಪಿ. ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್ ಪ್ರಾರಂಭಿಸಲು ಸಂಯೋಜಿತ ಮಹಾವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಹಾವಿದ್ಯಾಲಯವು ಮೂಲಭೂತ ಮತ್ತು ಶೈಕ್ಷಣಿಕ ಸೌಲಭ್ಯಗಳ ಜೊತೆಗೆ ಅರ್ಹ ಶಿಕ್ಷರನ್ನು ಅಂದರೆ ಎಂ.ಎ. ಯೋಗ ಪದವಿ ಹೊಂದಿದ ಶಿಕ್ಷರನ್ನು ನೇಮಕ ಹೊಂದಿರುವ ಹಾಗೂ ಯೋಗಾ ಪ್ರಯೋಗಾಲಯ ಹೊಂದಿದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

## VIII. ಸಂಶೋಧನಾ ಕೇಂದ್ರದ ಮಾನ್ಯತೆ:

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯ ಸ್ನಾತಕೋತ್ತರ ಕೋರ್ಸ ಸಂಯೋಜನೆ ಹೊಂದಿರುವಂತಹ ಮಹಾವಿದ್ಯಾಲಯದವರು ಸಂಶೋಧನಾ ಕೇಂದ್ರದ ಸ್ಥಾನಮಾನ ಪಡೆಯವುದಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದ್ದು, ಆಸಕ್ತ ಮಹಾವಿದ್ಯಾಲಯಗಳು ಈ ಕೆಳಕಾಣಿಸಿದ ಅರ್ಹತಾ ಮಾನದಂಡಗಳನ್ನು ಪೂರೈಸಿರಬೇಕು.

1. ಮಹಾವಿದ್ಯಾಲಯವನ್ನು ಸರ್ಕಾರ/ ವಿಶ್ವವಿದ್ಯಾಲಯ/ ಯುಜಿಸಿ ಮತ್ತು ಇನ್ನಿತರ ಸಂಬಂಧಿತ ಪ್ರಾಧಿಕಾರದ ನಿಯಮಾವಳಿಯಂತೆ ಪ್ರಾರಂಭಿಸಿರಬೇಕು.
2. ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಿ ಕಡ್ಡಾಯವಾಗಿ ಐದು ವರ್ಷಗಳನ್ನು ಪೂರೈಸಿರಬೇಕು.
3. ಮಹಾವಿದ್ಯಾಲಯವು ಕನಿಷ್ಠ "ಬಿ" ಗ್ರೇಡ್ ನ್ಯಾಕ್ ಮಾನ್ಯತೆಯನ್ನು ಪಡೆದಿರಬೇಕು.
4. ಮಹಾವಿದ್ಯಾಲಯವು ಹೊಂದಿರುವ ಸ್ನಾತಕೋತ್ತರ ಕೋರ್ಸ/ ವಿಷಯಕ್ಕೆ ಮಾತ್ರ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಜಿ ಸಲ್ಲಿಸಬಹುದು.
5. ಸಂಶೋಧನಾ ಕೇಂದ್ರ ಪಡೆಯವುದಕ್ಕಾಗಿ ಅಗತ್ಯವಿರುವ ಪಿ.ಎಚ್.ಡಿ. ಪದವಿಯನ್ನು ಹೊಂದಿರುವ ಮತ್ತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿಗಳನ್ವಯ ಮಾರ್ಗದರ್ಶಕರಾಗಲು (Guideship) ಅರ್ಹತೆಯನ್ನು ಹೊಂದಿರುವ ಬೋಧಕ ಸಿಬ್ಬಂದಿಯನ್ನು ಕಡ್ಡಾಯವಾಗಿ ಹೊಂದಿರಬೇಕು.
6. ಸಂಶೋಧನಾ ಕೇಂದ್ರಕ್ಕೆ ಅನ್ವಾಗುವಂತೆ ಸುಸಜ್ಜಿತ ಗ್ರಂಥಾಲಯದ ಕಟ್ಟಡ ಹೊಂದಿ, ಗ್ರಂಥಾಲಯದಲ್ಲಿ ಸಂಶೋಧನಾ ಕೇಂದ್ರಕ್ಕೆ ಬೇಕಾಗುವಷ್ಟು ಪುಸ್ತಕಗಳನ್ನು ಮತ್ತು ಜರ್ನಲ್‌ಗಳನ್ನು ಹೊಂದಿರಬೇಕು ಮತ್ತು ಗಣಕಯಂತ್ರ ಪ್ರಯೋಗಾಲಯ, ಅಂತರ್ಜಾಲದ ವ್ಯವಸ್ಥೆ, e-learning ವ್ಯವಸ್ಥೆಯ ಜೊತೆಗೆ ಸುಸಜ್ಜಿತ ಪ್ರಯೋಗಾಲಯದಂತಹ ಇನ್ನಿತರ ಎಲ್ಲ ಮೂಲಭೂತ ಮತ್ತು ಶೈಕ್ಷಣಿಕ ಸೌಕರ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು.
7. ಸಂಶೋಧನಾ ಕೇಂದ್ರದ ಮಾನ್ಯತೆ ಪಡೆಯುವುದಕ್ಕಾಗಿ ಮತ್ತು ಮುನ್ನಡೆಸಿಕೊಂಡು ಹೋಗುವುದಕ್ಕಾಗಿ ಸಂಸ್ಥೆಯ ಆಯವ್ಯಯದಲ್ಲಿ ಹಣವನ್ನು ಕಾಯ್ದಿರಿಸಿ ಸೂಕ್ತ ಹಣಕಾಸಿನ ವ್ಯವಸ್ಥೆ ಮಾಡಿಕೊಂಡಿರಬೇಕು.
8. ಸಂಶೋಧನಾ ಕೇಂದ್ರ ಪಡೆಯುವುದಕ್ಕಾಗಿ ಪ್ರತಿ ವಿಷಯಕ್ಕೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.

ಮೇಲ್ಕಾಣಿಸಿದ ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಸಂಶೊಧನಾ ಕೇಂದ್ರದ ಸ್ಥಾನಮಾನ ಪಡೆಯಲು ಇಚ್ಛಿಸುವ ಸಂಯೋಜಿತ ಮಹಾವಿದ್ಯಾಲಯಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ (www.rcub.ac.in) ಲಭ್ಯವಿರುವ ನಿಗದಿತ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ, ಸಂಬಂಧಿಸಿದ ಎಲ್ಲಾ ದೃಢೀಕೃತ ದಾಖಲೆಗಳನ್ನು ಲಗತ್ತಿಸಿ, ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಶುಲ್ಕವನ್ನು ಭರಿಸಿ, ವಿಶ್ವವಿದ್ಯಾಲಯವು ನಿಗದಿಪಡಿಸಿದ ನಮೂನೆಯಲ್ಲಿ ಭೌತಿಕವಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗದಲ್ಲಿ ಪಡೆಯಬಹುದಾಗಿದೆ.

**ವಿಶೇಷ ಸೂಚನೆ:** ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯ ಮಹಾವಿದ್ಯಾಲಯಗಳು ಯು.ಜಿ.ಸಿ. ನಿಯಮಾವಳಿಯನ್ವಯ College with Potential for Excellence (CPE) ಪ್ರಯೋಜನೆ ಪಡೆಯುವುದಕ್ಕಾಗಿ ಅಗತ್ಯ ಶೈಕ್ಷಣಿಕ ಮತ್ತು ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಅರ್ಹ ಮಹಾವಿದ್ಯಾಲಯಗಳು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ ಇವರ ಅಧಿಕೃತ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಸಹಿ/–

**ಕುಲಸಚಿವರು**